ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 572 (608)

2) ಸದಸ್ಯರ ಹೆಸರು : ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 14–12–2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಾಡು ಪ್ರಾಣಿಗಳು ಮಾನವರ ಮೇಲೆ ದಾಳಿ ಮಾಡಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಇದರಲ್ಲಿ ಎಷ್ಟು ಜನ ಮೃತಪಟ್ಟಿರುತ್ತಾರೆ; ಮೃತರ ಕುಟುಂಬದವರಿಗೆ ಪರಿಹಾರವಾಗಿ ಎಷ್ಟು ಹಣವನ್ನು ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ಕಳೆದ 3 ವರ್ಷಗಳಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ-ಗಾಯ / ಶಾಶ್ವತ ಅಂಗವಿಕಲತೆ ಹಾಗೂ ಮಾನವ ಪ್ರಾಣಹಾನಿ ಪ್ರಕರಣಗಳ ಸಂಖ್ಯೆ ಕೆಳಕಂಡಂತಿದೆ.

ಕ್ರ.ಸಂ	ವರ್ಷ	ಮಾನವ-ಗಾಯ / ಶಾಶ್ವತ ಅಂಗವಿಕಲತೆ	ಮಾನವ ಪ್ರಾಣಹಾನಿ
1	2018–19	237	26
2	2019–20	126	50
3	2020–21 (ನವೆಂಬರ್ 2020ರ ವರೆಗೆ)	80	22

ಮಾನವ ಪ್ರಾಣಹಾನಿ ಪ್ರಕರಣ ಹಾಗೂ ಪಾವತಿಸಿದ ದಯಾತ್ಮಕಧನದ ವಿಭಾಗವಾರು / ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:

ಕ್ರ ಸಂ	ವಿಭಾಗ	ಮಾನವ ಪ್ರಾಣಹಾನಿ				(ರೂ.ಲಕ್ಷಗಳಲ್ಲಿ)	
		2018–19		2019–20		2020–21 (ಸೆಪ್ಟೆಂಬರ್ 15ರವರೆಗೆ)	
		ಪ್ರಕರಣ	ಮೊತ್ತ	ಪ್ರಕರಣ	ಮೊತ್ತ	ಪ್ರಕರಣ	ಮೊತ್ತ
1.	ರಾಮನಗರ	1 (ಆನೆ)	5.00	2 (ಆನೆ)	10.00	2 (ಚಿರತೆ)	15.00
	ಬೆಂಗಳೂರು ಗ್ರಾಮಾಂತರ ಜಿಲ್ಲೆ						
2.	ಬೆಂಗಳೂರು ಗ್ರಾಮಾಂತರ	–	–	1 (ಆನೆ)	5.00	–	–
3.	ಬನ್ನೇರುಘಟ್ಟ ರಾ.ಉ	–	–	1 (ಆನೆ)	7.50	1 (ಆನೆ)	7.50
4.	ಕೋಲಾರ	1 (ಆನೆ)	5.00	4 (ಆನೆ)	30.00	1 (ಆನೆ)	7.50

5.	ಚಿಕ್ಕಬಳ್ಳಾಪುರ	–	–	–	–	–	–
6.	ಬೆಳಗಾವಿ	1 (ಕರಡಿ)	5.00	–	–	–	–
7.	ಬಾಗಲಕೋಟೆ	1 (ಮೊಸಳೆ)	5.00	1 (ಮೊಸಳೆ)	5.00	1 (ಮೊಸಳೆ)	7.50
8.	ಬಿಜಾಪುರ	1 (ಮೊಸಳೆ)	5.00	–	–	1 (ತೋಳ)	7.50
9.	ಬಳ್ಳಾರಿ	3 (ಚಿರತೆ)	15.00	1 (ಕರಡಿ) 1 (ಮೊಸಳೆ)	12.50	–	–
10.	ಚಿತ್ರದುರ್ಗ	–	–	1 (ಕರಡಿ)	5.00	–	–
11.	ದಾವಣಗೆರೆ	–	–	–	–	–	–
12.	ಕೊಪ್ಪಳ	–	–	–	–	1 (ಚಿರತೆ)	7.50
	ಚಾಮರಾಜನಗರ ಜಿಲ್ಲೆ						
13.	ಬಿ.ಆರ್.ಟಿ	3 (ಆನೆ)	15.00	1 (ಆನೆ)	5.00	1 (ಆನೆ)	7.50
14.	ಕಾವೇರಿ	1 (ಆನೆ)	5.00	1 (ಆನೆ)	5.00	–	–
15.	ಮಲೆ ಮಹದೇಶ್ವರ	1 (ಆನೆ)	5.00	4 (ಆನೆ)	20.00	1 (ಆನೆ)	7.50
16.	ಬಂಡೀಪುರ	1 (ಆನೆ)	5.00	3 (ಆನೆ) 2 (ಹುಲಿ)	27.50	2 (ಆನೆ)	15.00
	ಚಿಕ್ಕಮಗಳೂರು ಜಿಲ್ಲೆ						
17.	ಚಿಕ್ಕಮಗಳೂರು	2 (ಆನೆ)	10.00	2 (ಆನೆ) 1 (ಕಾಡುಹಂದಿ)	15.00	–	–
18.	ಭದ್ರಾ	–	–	–	–	–	–
19.	ಕೊಪ್ಪ	1 (ಕಾಡುಕೋಣ)	5.00	2 (ಕಾಡುಕೋಣ)	12.50	–	–
20.	ಧಾರವಾಡ	–	–	–	–	–	–
21.	ಗದಗ	–	–	–	–	–	–
22.	ಹಾವೇರಿ	–	–	–	–	–	–
23.	ಬೀದರ್	–	–	1 (ಕರಡಿ)	7.50	–	–
24.	ಕಲಬುರಗಿ	1 (ಕಾಡುಹಂದಿ)	5.00	1 (ಕಾಡುಹಂದಿ)	5.00	2 (ಕಾಡುಹಂದಿ)	15.00
25.	ರಾಯಚೂರು	–	–	1 (ತೋಳ)	7.50	1 (ಮೊಸಳೆ)	*
26.	ಯಾದಗಿರಿ	–	–	1 (ಮೊಸಳೆ)	5.00	–	–
	ಹಾಸನ ಜಿಲ್ಲೆ						
27.	ಹಾಸನ	1 (ಆನೆ)	5.00	3 (ಆನೆ)	15.00	1 (ಆನೆ)	7.50
28.	ತುಮಕೂರು	1 (ಕರಡಿ)	5.00	1 (ಆನೆ) 4 (ಚಿರತೆ)	32.50	2 (ಚಿರತೆ)	15.00

			ಕೊಡಗು ಜಿಲ್ಲೆ				
29.	ಮಡಿಕೇರಿ	–	–	2 (ಆನೆ)	12.50	3 (ಆನೆ)	22.50
30.	ವಿರಾಜಪೇಟೆ	–	–	1 (ಆನೆ) 1 (ಕಾಡುಕೋಣ)	12.50	1 (ಆನೆ)	*
31.	ಮಡಿಕೇರಿ ವಜೀ	–	–	1 (ಆನೆ)	5.00		
			ಉಡುಪಿ ಜಿಲ್ಲೆ				
32.	ಕುಂದಾಪುರ	1 (ಕಾಡುಹಂದಿ)	5.00	1 (ಜಿಂಕೆ) 2 (ಕಾಡುಕೋಣ)	15.00	–	–
33.	ಮಂಡ್ಯ	1 (ಮೊಸಳೆ)	5.00	–	–	–	–
			ಮೈಸೂರು ಜಿಲ್ಲೆ				
34.	ಮೈಸೂರು	–	–	2 (ಆನೆ)	12.50		
35.	ನಾಗರಹೊಳೆ	1 (ಆನೆ) (3 ಹುಲಿ)	20.00	–	–	(1 ಹುಲಿ)	7.50
	ಒಟ್ಟು	**26**	**130.00**	**50**	**272.50**	**22**	**150.00**

* 2020–21ನೇ ಸಾಲಿನಲ್ಲಿ ಎರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ವಾರಸುದಾರರ ದಾಖಲೆಗಳು ಸ್ವೀಕೃತವಾದ ನಂತರ ದಯಾತ್ಮಕಧನ ಪಾವತಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಆ)	ಇತ್ತೀಚಿನ ದಿನಗಳಲ್ಲಿ ವನ್ಯಜೀವಿಗಳು ಮಾನವನ ಮೇಲೆ ದಾಳಿ ಮಾಡುವುದು ಮತ್ತು ಹಳ್ಳಿಗಳಲ್ಲಿ ಕಾಣಿಸಿಕೊಳ್ಳಲು ಕಾರಣಗಳೇನು;	ಸಮಗ್ರ ರಕ್ಷಣೆ ಮತ್ತು ಸಂರಕ್ಷಣಾ ಕ್ರಮಗಳಿಂದ ರಾಜ್ಯದಲ್ಲಿ 2017–18ನೇ ಸಾಲಿನ ಹುಲಿ ಗಣತಿ ಪ್ರಕಾರ ಅಂದಾಜು ಒಟ್ಟು 524 ಹುಲಿಗಳಿದ್ದು, ಕರ್ನಾಟಕವು ರಾಷ್ಟ್ರದಲ್ಲಿಯೇ ಮುಂಚೂಣಿಯಲ್ಲಿರುತ್ತದೆ. 2017ನೇ ಸಾಲಿನ ಆನೆ ಗಣತಿ ಅಂದಾಜಿನ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 6049 ಆನೆಗಳು ಇದ್ದು, ದೇಶದ ಒಟ್ಟು ಆನೆಗಳ ಶೇ.25% ರಷ್ಟು ಆನೆಗಳು ನಮ್ಮ ರಾಜ್ಯದಲ್ಲಿದ್ದು, ರಾಷ್ಟ್ರದಲ್ಲಿಯೆ ಪ್ರಥಮ ಸ್ಥಾನದಲ್ಲಿದೆ. ಅಲ್ಲದೇ, ಆನೆ/ವನ್ಯಜೀವಿ ವಲಯ ಪ್ರದೇಶಗಳಲ್ಲಿನ ಭೂಪ್ರದೇಶದ ಬಳಕೆಯಲ್ಲಿನ ಬದಲಾವಣೆ, ಅತಿಯಾದ ಸಂಚಾರ ದಟ್ಟಣೆ ಹಾಗೂ ರಸ್ತೆಯಲ್ಲಿನ ಚಲನವಲನಗಳು, ಹೆಚ್ಚಿನ ಸಂಖ್ಯೆಯಲ್ಲಿ ತಲೆಯೆತ್ತುತ್ತಿರುವ ಪ್ರವಾಸಿ ಚಟುವಟಿಕೆಗಳು, ಕಾಡಾನೆಗಳು ಸಂಚರಿಸುವ ವಲಯ ಪ್ರದೇಶಗಳ ಛಿದ್ರಗೊಳ್ಳುವಿಕೆ ಹಾಗೂ ಕಾಡಂಚಿನಲ್ಲಿರುವ ತೋಟಗಳಲ್ಲಿ ವನ್ಯಪ್ರಾಣಿಗಳನ್ನು ಆಕರ್ಷಿಸುವ ಬೆಳೆಗಳಾದ ಕಬ್ಬು, ಭತ್ತ, ತೆಂಗು, ಬಾಳೆ, ಹಲಸು ಮತ್ತು ವಾಣಿಜ್ಯ ಬೆಳೆಗಳಿಗೆ ಆಕರ್ಷಿತಗೊಂಡು ದಾಳಿ ಮಾಡುತ್ತಿರುವುದು ಕಂಡುಬಂದಿದೆ.
ಇ)	ಇಂತಹ ಪ್ರಕರಣಗಳನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದ ಜಿಲ್ಲೆಗಳಲ್ಲಿ ಇಲಾಖಾ ವತಿಯಿಂದ ಆಯಾ ಅರಣ್ಯ/ವನ್ಯಜೀವಿ ವಿಭಾಗ ವ್ಯಾಪ್ತಿಯಲ್ಲಿ ಉಂಟಾಗುವ ವನ್ಯಪ್ರಾಣಿ/ಕಾಡಾನೆ ಹಾವಳಿಯನ್ನು ತಡೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:

		1. ರಾಜ್ಯದಲ್ಲಿರುವ ವನ್ಯಜೀವಿಗಳಿಗೆ ಸಂಪೂರ್ಣ ರಕ್ಷಣೆ ನೀಡುವ ಸಲುವಾಗಿ ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯ, ಹುಲಿ ಮೀಸಲು ಅರಣ್ಯ, ಸಂರಕ್ಷಿತ ಮೀಸಲು ಅರಣ್ಯಗಳನ್ನು ಘೋಷಿಸಲಾಗಿದೆ.
		2. ಅರಣ್ಯ ಪ್ರದೇಶದಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು 2019-20ನೇ ಸಾಲಿನಿಂದ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಹಂತ ಹಂತವಾಗಿ ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅವಕಾಶ ಮಾಡಲಾಗಿದೆ.
		3. ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗಿದೆ.
		4. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆ ತಡೆಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.
		5. ಕಳ್ಳಬೇಟೆ ತಡೆ ಶಿಬಿರಗಳ ಹಾಗೂ ಕ್ಷಿಪ್ರ ಕಾರ್ಯಾಚರಣೆ ತಂಡಗಳ ರೂಪದಲ್ಲಿ ಕಾಡಾನೆ ಹಿಮ್ಮೆಟಿಸುವ ತಂಡಗಳನ್ನು ರಚಿಸಿ, ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ, ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಹಾಗೂ Wireless Networking ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.
		6. ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯ ನಿರ್ವಹಿಸುವ ಮಾಹಿತಿಕೇಂದ್ರ ಸ್ಥಾಪಿಸಲಾಗಿದೆ.
		7. ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ, ಅದಕ್ಕೆ ರೇಡಿಯೋಕಾಲರ್ ಅಳವಡಿಸಿ ಆನೆಗಳ ಚಲನ-ವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವಗಾಯ ತಪ್ಪಿಸಲು ಕ್ರಮ ವಹಿಸಲಾಗಿದೆ.
		8. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆಹಿಡಿದು ಆಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.
		9. ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ-ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ಆದ್ಯತೆ ಮೇರೆಗೆ ನಿಯಮಾನುಸಾರ ಪರಿಶೀಲಿಸಿ, ಶೀಘ್ರವೇ ನೇರವಾಗಿ ಸಂತ್ರಸ್ತರ ಖಾತೆಗೆ ಪರಿಹಾರಧನ ಪಾವತಿಸುವ ಪ್ರಕ್ರಿಯೆಯನ್ನು ಇ-ಪರಿಹಾರ ತಂತ್ರಾಂಶದ ಮೂಲಕ ನಿರ್ವಹಿಸಲಾಗುತ್ತಿದೆ.

ಸಂಖ್ಯೆ: ಅಪಜೀ 221 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು